ಪ್ರತಿ ದಿವಸ ಚನ್ನಪಟ್ಟಣದಲ್ಲಿ ಒಂದು ಸಾವಿರ ಜನರು ಔಟ್ ಪೇಷೆಂಟ್ಸ್ ಬರುತ್ತಿದ್ದಾರೆ. ಬೆಂಗಳೂರು, ಮೈಸೂರು ರಸ್ತೆಯಲ್ಲಿ ಪ್ರತಿದಿನ ಆಕ್ಸಿಡೆಂಟ್ಸ್ ಜಾಸ್ತಿಯಾಗುತ್ತಿವೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ಈ ವರ್ಷ 1993-94ಕ್ಕೆ ಆದರೂ ಆ ಒಂದು ಪೋಸ್ಟ್‌ಸ್ಯಾಂಕ್ಷನ್ ಮಾಡಿಸಿಕೊಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್: ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅಲ್ಲಿನ ಪರಿಸ್ಥಿತಿ ಇಲ್ಲ. ಚನ್ನಪಟ್ಟಣ ಆಸ್ಪತ್ರೆಗೆ ನಾನು ಸಮಕ್ಷಮ ಭೇಟಿ ಕೊಟ್ಟು ಪೂರ್ಣವಾಗಿ ತಪಾಸಣೆ ಮಾಡಿದಾಗ ಅಲ್ಲಿ ನಿಯಮಾನುಸಾರವಾಗಿ ಎಷ್ಟು ವೈದ್ಯರು ಇರಬೇಕು ಅಷ್ಟು ವೈದ್ಯರನ್ನು ಕೊಟ್ಟಿದ್ದೇವೆ. ಅವರು ಹೇಳಿದಂತಹ ಇ.ಎನ್.ಟಿ. ಸ್ಪೆಶಲಿಸ್ಟ್ ಹಾಗು ಕಣ್ಣು ತಜ್ಞರನ್ನು ಒದಗಿಸುವ ಸೌಲಭ್ಯ ಈಗ ಇರತಕ್ಕ ನೂರು ಹಾಸಿಗೆ ಆಸ್ಪತ್ರೆಗೆ ಕೊಡುವುದಕ್ಕಾಗುವುದಿಲ್ಲ. ಅದನ್ನು ಹೆಚ್ಚಿನ ದರ್ಜೆಗೆ ಏರಿಸಿದರೆ ಆ ಸೌಲಭ್ಯಗಳನ್ನು ಕೊಡುವುದಕ್ಕಾಗುತ್ತದೆಯೇ ಹೊರತು ಈಗ ಇರತಕ್ಕ ವ್ಯವಸ್ಥೆಯಲ್ಲಿ ಅವರ ಬೇಡಿಕೆ ಪ್ರಕಾರ ಕೊಡುವುದಕ್ಕಾಗುವುದಿಲ್ಲ. ಹೆಚ್ಚಿನ ದರ್ಜೆಗೆ ಏರಿಸಿದರೆ ಮಾತ್ರ ಆ ಸೌಲಭ್ಯವನ್ನು ಒದಗಿಸುವುದಕ್ಕಾಗುತ್ತದೆಂದು ನಾನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಾದತ್ ಆಲಿ ಖಾನ್: ನೂರು ಬೆಡೆಡ್ ಆಸ್ಪತ್ರೆಯನ್ನು 200 ಬೆಡೆಡ್ ಆಸ್ಪತ್ರೆಯನ್ನಾಗಿ ಮಾಡುತ್ತೇವೆಂದು 1992-93ರಲ್ಲಿ ಕೊಟ್ಟ ಆಶ್ವಾಸನೆ ಇನ್ನೂ ಕಾರ್ಯಗತವಾಗಿಲ್ಲ. 110 ಬೆಡೆಡ್ ಹಾಸ್ಪಿಟಲ್ ಮಾಡಿದರೆ ಎರಡೂ ಸೌಲಭ್ಯ ಬರುತ್ತದೆ. ಅದು ಮಾನ್ಯ ರಾಜ್ಯಪಾಲರು ಓಪನ್ ಮಾಡಿರತಕ್ಕ ಆಸ್ಪತ್ರೆ. ತಾವು ರೆಕಾರ್ಡ್ಸ್ ತೆಗೆದು ನೋಡಿ. 1992-93ರಲ್ಲಿ ಮಂಜೂರು ಮಾಡುತ್ತೇವೆಂದು ಹೇಳಿದ್ದು ಇನ್ನೂ ಜಾರಿ ಆಗಿಲ್ಲ. ಈಗ ನಾವು 93-94ಕ್ಕೆ ಬರುತ್ತಿದ್ದೇವೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್: ನೂರು ಹಾಸಿಗೆಯುಳ್ಳ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕೆಂದು ಆಶ್ವಾಸನೆ ಕೊಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತು ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಆದಷ್ಟು ಜಾಗ್ರತೆ ಅದನ್ನು ಮಂಜೂರ್ಮಾಡುವ ವ್ಯವಸ್ಥೆ ಮಾಡಲಾಗುವುದು.

ಖಾಸಗಿ ಅನುದಾನಿತ ಶಾಲೆಗಳಿಗೆ ಸಹಾಯ ಧನ ನೀತಿ

156 - ಶ್ರೀ ಎ.ಕೆ. ಅನಂತ ಕೃಷ್ಣ (ಶಿವಾಜಿನಗರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಅನುದಾನಿತ ಶಾಲೆಗಳಲ್ಲಿ ಹೆಚ್ಚುವರಿ ಸ್ಥಳಾವಕಾಶ ನಿರ್ಮಾಣಕ್ಕಾಗಿ ಸಮಾನಾಂತರ ಆರ್ಥಿಕ ಅನುದಾನ ಸಹಾಯ ನೀಡುವ ಬಗ್ಗೆ ಸರ್ಕಾರದ ನೀತಿ ಏನು?

ಆ) ಸರ್ಕಾರವು ಸಮಾನಾಂತರ ಆರ್ಥಿಕ ಸಹಾಯ ನೀಡುವುದನ್ನು ಯಾವಾಗಿನಿಂದ ನಿಲ್ಲಿಸಿದೆ?

ಇ) ಕಟ್ಟಡ ನಿರ್ಮಾಣಕ್ಕಾಗಿ ನೀಡುವ ಸಮಾನಾಂತರ ಅನುದಾನ ಮಂಜೂರು ಮಾಡದಿರುವುದರಿಂದ ಶಾಲಿಗಳಿಗೆ ಸಾಕಷ್ಟು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಮುಖ್ಯವಾಗಿ ಅನುದಾನ ಪಡೆಯದ ಸಂಸ್ಥೆಯ ಶಾಲೆಗಳಿಗೆ ಅಂತಹ ಸಹಾಯವನ್ನು ನೀಡಲು ಕೂಡಲೇ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಉ) ಈ ವಿಚಾರದಲ್ಲಿ ಶ್ರೀಮತಿ ಕಮಾಲಾಬಾಯಿ ಶಿಕ್ಷಣ ಸಂಸ್ಥೆಯ ಪ್ರಾಥಮಿಕ ಶಾಲೆಯ ಬಗ್ಗೆ ಅನುದಾನಕ್ಕಾಗಿ ಸಲ್ಲಿಸಿದ ಅರ್ಜಿಯ ಮೇಲೆ ಸರ್ಕಾರ ತೆಗೆದಕೊಂಡ ಕ್ರಮವೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಹೆಚ್ಚುವರಿ ಸ್ಥಳಾವಕಾಶ ನಿರ್ಮಾಣಕ್ಕಾಗಿ ಸಮಾನಾಂತರ ಆರ್ಥಿಕ ಅನುದಾನ ಸಹಾಯ ನೀಡುವ ಬಗ್ಗೆ ಅನುದಾನ ಸಂಹಿತೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಇದುವರೆವಿಗೂ ಅಂತಹ ಪ್ರಸ್ತಾವನೆ ಬಂದಿರುವುದಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು (ಉ) ಪ್ರಶ್ನೆಗೆ ಉತ್ತರವಾಗಿ ಇದುವರೆಗೂ ಅಂಥ ಪ್ರಸ್ತಾವನೆ ಬಂದಿರುವುದಿಲ್ಲವೆಂದು ಹೇಳಿದ್ದಾರೆ. ಹಿಂದೆ ಶಿಕ್ಷಣ ಮಂತ್ರಿಗಳು ಯಾರ್ಯಾರಿದ್ದರು ಅವರೆಲ್ಲರಿಗೂ ನಾನು ಅರ್ಜಿಯನ್ನು ಕೊಟ್ಟಿದ್ದೇನೆ. ಈ ಮಂತ್ರಿಗಳಿಗೆ ಮಾತ್ರ ಕೊಟ್ಟಿರಲಿಲ್ಲ. ಆ ಒಂದು ಅಪ್ಲಿಕೇಷನ್ ಏನಿದೆ ಅದು ಶಾಲೆಯ ಕಡೆಯಿಂದ ಇದುವರೆಗೂ ಬರುತ್ತಿದೆ. ಅದನ್ನು ಪರಿಶೀಲನೆ ಮಾಡಿ ಸರಿಯಾದ ಉತ್ತರವನ್ನು ಕೊಡಲಿಲ್ಲ. ಈ ಮಂತ್ರಿಗಳು ಅದರ ಬಗ್ಗೆ ತೀವ್ರ ಗಮನ ಹರಿಸಬೇಕು. ಒಳ್ಳೆಯ ಶಿಕ್ಷಣ ಸಂಸ್ಥೆಗಳು ಖಾಸಗಿಯವರಾದರೂ ಕೂಡ ಚೆನ್ನಾಗಿ ಕೆಲಸ ಮಾಡುತ್ತಿವೆ. ಅವರಿಗೂ ನಾವು ಪ್ರೋತ್ಸಾಹ ಕೊಡುವುದಿಲ್ಲವೆಂದರೆ ಹೇಗೆ? ಸರ್ಕಾರದಿಂದ ಆಗುತ್ತಿರತಕ್ಕ ಶಿಕ್ಷಣ ಸಂಸ್ಥೆಗಳು ಸರಿಯಾಗಿ ನಡೆಯುತ್ತಿಲ್ಲ. ಅವರಿಗೂ ನೀವು ಕೊಡದಿದ್ದರೆ ಮಕ್ಕಳಿಗೆ ಯಾವ ರೀತಿ ವಿದ್ಯಾಭ್ಯಾಸ ಕೊಡುವುದಕ್ಕಾಗುತ್ತದೆ? ಅದರಲ್ಲಿ ಯಾವತ್ತೂ ನಾವು ಯಶಸ್ಸನ್ನು ಪಡೆಯುತ್ತೇವೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಖಾಸಗಿ ಪ್ರೌಢಶಾಲೆ ಸಂಹಿತೆ ನಿಯಮ 25 ಮತ್ತು ಪ್ರಾಥಮಿಕ ಶಾಲಾ ಅನುದಾನ ಸಂಹಿತೆ ನಿಯಮ 32 ಈ ಎರಡೂ ನಿಯಮಗಳ ಪ್ರಕಾರ ಅನುದಾನಿತ ಶಾಲೆಗಳಿಗೆ ಕಟ್ಟಡ ಕೊಡುವ ಒಂದು ಅವಕಾಶ ಹಿಂದೆ ಇತ್ತು. ಆದರೆ ಇತ್ತೀಚೆಗೆ ಅಂದರೆ ಸರ್ಕಾರಿ ಆದೇಶ ಡಿ-4 ಪಿಯುಡಿ 87ರಲ್ಲಿ ಈ ಕಟ್ಟಡಕ್ಕೆ ಅನುದಾನ ಕೊಡತಕ್ಕ ಪದ್ಧತಿಯನ್ನು ನಿಲ್ಲಿಸಿದ್ದೇವೆ. ಆದರ ಪ್ರಕಾರ ನಾವು ಖಾಸಗಿ ಶಾಲೆಗಳಿಗೆ ಕಟ್ಟಡಕ್ಕೆ ಅನುದಾನ ಕೊಡುತ್ತಿಲ್ಲ. ಆದರೆ ಮಾನ್ಯ ಸದಸ್ಯರು ಇದು ಸರಿಯಲ್ಲ ಎಂದು ಹೇಳಿದರು. ಇದುವರೆಗೆ ಅಂಥ ಪ್ರಸ್ತಾವನೆ ಬಂದಿರುವುದಿಲ್ಲವೆಂದು ಏನು ಹೇಳಿದ್ದಾರೆ, ಅದು ಸರಿಯಲ್ಲ, ಈಗಾಗಲೇ ಸಾಕಷ್ಟು ಸಲ ಇದರ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೇನೆಂದು ಹೇಳಿದ್ದಾರೆ. ಈ ರೀತಿಯಾಗಿ ಸರಿಯಾದ ಮಾಹಿತಿ ಇಲ್ಲದೆ ಕೊಡುವುದು ಸರಿಯಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ರೀತಿ ಆಗದೆ ಇರುವ ಹಾಗೆ ನಾನು ನೋಡಿಕೊಳ್ಳುತ್ತೇನೆ.

ವನ್ಯ ಜೀವಿಗಳ ಸಂರಕ್ಷಣೆಗೆ ಕ್ರಮ

2 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿರುವ ಅಭಯ ಅರಣ್ಯಗಳೆಷ್ಟು ಹಾಗೂ ರಾಷ್ಟ್ರೀಯ ಉದ್ಯಾನವನಗಳೆಷ್ಟು?

ಆ) ವನ್ಯಮೃಗಗಳ ರಕ್ಷಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು) :

ಅ) ಕರ್ನಾಟಕದಲ್ಲಿ 5 ರಾಷ್ಟ್ರೀಯ ಉದ್ಯಾನವನಗಳು ಹಾಗೂ 19 ಅಭಯಾರಣ್ಯಗಳಿವೆ.